# ಕ್ಯಾಟಲಿನಾ
## ವಿಲಾಸಿ ದ್ವೀಪದ ಸುಂದರ ಯಾನ



**ಕಡಲು–ಮುಗಿಲು ಒಂದೆನಿಸುವ ಸೋಜಿಗ ತೋರುವ, ಸಮುದ್ರ ಕಿನಾರೆಯುದ್ದಕ್ಕೂ ಚೆಲುವನ್ನು ಹರಡಿಕೊಂಡಿರುವ ದ್ವೀಪ ಕ್ಯಾಟಲಿನಾ. ಬೆಟ್ಟಗುಡ್ಡಗಳ ನಡುವಿನ ಸಮುದ್ರ ತೀರ, ತಿಳಿನೀರಲ್ಲಿ ತೇಲುವ ಹಡಗುಗಳ ಸುಂದರ ದೃಶ್ಯಗಳು ಈ ದ್ವೀಪಕ್ಕೆ 'ವಿಲಾಸಿ' ಪಟ್ಟ ತಂದುಕೊಟ್ಟಿವೆ.**

**■ ಹೇಮಲತಾ ರಾಜಗೋಪಾಲ್**

**Santa Catalina Island** – ಈ ಸುಂದರ ದ್ವೀಪದ ಪೂರ್ಣ ಹೆಸರು. ಅಮೆರಿಕದ ಕ್ಯಾಲಿಫೋರ್ನಿಯಾ ಪ್ರಾಂತ್ಯಕ್ಕೆ ಸೇರಿರುವ ಈ ದ್ವೀಪ, ದಕ್ಷಿಣ ತುದಿಯ ಲಾಸ್ ಏಂಜಲೀಸ್ ಮಹಾನಗರದ ಸಮುದ್ರ ಕಿನಾರೆಯಿಂದ 30 ಮೈಲಿ ದೂರದಲ್ಲಿ ಪೆಸಿಫಿಕ್ ಸಾಗರದಲ್ಲಿದೆ.

ಕ್ಯಾಟಲಿನಾ ಸೌಂದರ್ಯದ ಬಗ್ಗೆ ಕೇಳಿ ತಿಳಿದಿದ್ದ ನಾವು, ಅಲ್ಲಿಗೆ ಹೋಗಬೇಕೆಂದು ಯೋಜನೆ ರೂಪಿಸಿದ್ದೆವು. ಅಂತೆಯೇ, ನಾವು ನಾಲ್ವರು ನಾಲ್ಕು ದಿನಗಳ ಪ್ರವಾಸಕ್ಕೆ ಸಿದ್ಧತೆ ಮಾಡಿಕೊಂಡೆವು. ಮಧ್ಯ ಕ್ಯಾಲಿಫೋರ್ನಿಯಾದ ಬೇ ಏರಿಯಾದ ಹೇವಾರ್ಡ್ ಪಟ್ಟಣದ ನಮ್ಮ ಮನೆಯಿಂದ 6 ಗಂಟೆಗಳ ಕಾರು ಪ್ರಯಾಣದೊಂದಿಗೆ ಲಾಸ್ ಏಂಜಲೀಸ್ ತಲುಪಿದೆವು. ಒಂದು ದಿನ ಲಾಸ್ ಏಂಜಲೀಸ್ ಸುತ್ತಾಡಿ ಮರುದಿನ ಕ್ಯಾಟಲಿನಾ ದ್ವೀಪಕ್ಕೆ ಹೊರಡಲು ಅಣಿಯಾದೆವು.

ಈ ದ್ವೀಪಕ್ಕೆ ಹೋಗಲು ಎರಡು ದಾರಿಗಳಿವೆ. ಒಂದು, ಹೆಲಿಕಾಪ್ಟರ್. ಮತ್ತೊಂದು ಫೆರಿ (Ferry) ಜಲಮಾರ್ಗ. ನಾವು ಆರಿಸಿಕೊಂಡುದು ಎರಡನೆಯದು, ಅಂದರೆ ಸಮುದ್ರ ಯಾನ.

ಎರಡು ವಾರಗಳ ಮುಂಚಿತವಾಗಿಯೇ ಫೆರಿಯಲ್ಲಿ ನಮ್ಮ ಸೀಟುಗಳನ್ನು ಆನ್‌ಲೈನ್‌ನಲ್ಲಿ ಕಾದಿರಿಸಿದ್ದೆವು. ಫೆರಿ ಏರಲು ಬಂದರು ಪಟ್ಟಣ ಸ್ಯಾನ್ ಪೆಡ್ರೊ ತಲುಪಿದೆವು. ಬೃಹತ್ ಗಾತ್ರದ ಪ್ರಯಾಣಿಕ ಹಡಗೊಂದು ಲಂಗರು ಹಾಕಿದ್ದನ್ನು ಕಂಡೆವು. ಹತ್ತಾರು ಮಹಡಿಗಳ, ನೂರಾರು ಅಡಿ ಉದ್ದದ 'ಡೈಮಂಡ್ ಪ್ರಿನ್ಸೆಸ್' ಎಂಬ ಹಡಗದು. ನಮ್ಮ ಪ್ರಯಾಣ ಇದರಲ್ಲೇ? ಒಮ್ಮೆ ಆಶ್ಚರ್ಯಪಟ್ಟೆವು.

ಮತ್ತೆ ತಿಳಿಯಿತು, ನಮಗಾಗಿ ಮೋಟಾರು ಚಾಲಿತ ದೋಣಿ ಬರಲಿದೆ ಎಂದು. ನಮ್ಮಂತೆ ನೂರಕ್ಕೂ ಹೆಚ್ಚು ಜನರು ಕಾಯುತ್ತಿದ್ದರು. ಕ್ಯಾಟಲಿನಾ ಎಕ್ಸ್‌ಪ್ರೆಸ್ ಹೆಸರಿನ ಫೆರಿ ಬಂತು. ಸಾಲಾಗಿ ಸಾಗಿ ಟಿಕೆಟ್ ತೋರಿಸಿ ಎಲ್ಲರೂ ಹತ್ತಿದರು. ಹೋಗಿ ಬರುವ ಚಾರ್ಜ್, ಒಬ್ಬರಿಗೆ 83 ಡಾಲರುಗಳು. 150 ಜನರ ಅವಕಾಶದ ಮೂರು ಅಂತಸ್ತುಗಳ ದೋಣಿಯದು. ಮೇಲಿನದು ತೆರೆದ ಅಂತಸ್ತು. 70 ನಿಮಿಷಗಳ ಸಾಗರ ಯಾನದ ನಂತರ ದ್ವೀಪ ತಲುಪಿದೆವು. **WELCOME TO AVALON** ಎನ್ನುವ ಬೋರ್ಡ್ ನಮ್ಮನ್ನು ಸ್ವಾಗತಿಸಿತು.

ಅವಲಾನ್ ಈ ದ್ವೀಪದ ಏಕಮಾತ್ರ ಪಟ್ಟಣ. ಹೆಚ್ಚಿನ ಜನವಾಸ ಇಲ್ಲಿ ಮಾತ್ರ. ಫೆರಿಯಿಂದ ಇಳಿದದ್ದೇ ಈ ಪಟ್ಟಣಕ್ಕೆ. ಪಟ್ಟಣದ ಹಿಂದೆ ಒರಟಾದ ಬಂಡೆಕಲ್ಲುಗಳಿಂದ, ಏರುತಗ್ಗುಗಳಿಂದ, ಕುರುಚಲು ಗಿಡಗಂಟೆಗಳಿಂದ ಕೂಡಿದ ಬೆಟ್ಟಗಳನ್ನು ಕಂಡೆವು.

ಸಮುದ್ರದಲ್ಲಿ ತಂಗಿದ ನೂರಾರು ದೋಣಿಗಳು, ಆಬಾಲವೃದ್ಧರಾದಿಯಾಗಿ ತಂಡತಂಡವಾಗಿ ವಿಹರಿಸುವ ಜನರು, ಮಾರ್ಗಗಳ ಉದ್ದಕ್ಕೂ ನೂರಾರು ರೆಸ್ಟೊರೆಂಟ್‌ಗಳು... ಇದೊಂದು ವಿಹಾರ, ವಿಲಾಸ ದ್ವೀಪವೆಂಬುದನ್ನು ಸಾರಿ ಹೇಳುತಿತ್ತು. ದ್ವೀಪದ ಉದ್ದ 22 ಮೈಲಿ, ಅಗಲ 8 ಮೈಲಿ, ವಿಸ್ತಾರ 75 ಚದರ ಮೈಲಿ. ಇಲ್ಲಿನ ಜನಸಂಖ್ಯೆ ಸುಮಾರು 4000. ಸುಮಾರು ಮೂರು ಚದರ ಮೈಲಿ ಪ್ರದೇಶಕ್ಕಷ್ಟೇ ಜನವಾಸ ಸೀಮಿತ. 639 ಮೀಟರು ಎತ್ತರದ 'ಮೌಂಟ್ ಒರಿಜಾಬಾ' ಇಲ್ಲಿಯ ಅತಿ ಎತ್ತರದ ಬೆಟ್ಟ. ಮಧ್ಯಾಹ್ನ ಎರಡು ಗಂಟೆಗೆ ಕಾಲಿಟ್ಟ ನಾವು ದ್ವೀಪ ಸುತ್ತಾಡಲು ಸುತ್ತಮುತ್ತ ನೋಡಿದಾಗ ಡಾಂಬರು ಹಾಕಿದ ಮಾರ್ಗವಿದ್ದರೂ ಯಾವುದೇ ಕಾರುಗಳಾಗಲೀ ಬಸ್ ಆಗಲೀ ಕಾಣಲಿಲ್ಲ.

ಆಟೋರಿಕ್ಷಾ ರೀತಿಯ, ಆದರೆ ತೆರೆದ ಗಾಲ್ಫ್ ಕಾರ್ಟ್‌ಗಳು ಓಡಾಡುತ್ತಿದ್ದವು. ಇವು ಬಾಡಿಗೆಗೆ ಇಲ್ಲಿ ಸಿಗುವ ವಾಹನಗಳೆಂದು ಗೊತ್ತಾಯಿತು. ಗಾಲ್ಫ್ ಕಾರ್ಟ್‌ಗಳೇ ಈ ದ್ವೀಪದ ವಾಹನ ವ್ಯವಸ್ಥೆ. ಮೇನ್ ಲ್ಯಾಂಡ್‌ನ ಕಾರು ಬೈಕುಗಳಿಗೆ ಇಲ್ಲಿ ಪ್ರವೇಶವಿಲ್ಲ. ಮುಂದುವರಿದಾಗ ಈ ಕಾರ್ಟ್‌ಗಳ ತಂಗುದಾಣ ಕಂಡೆವು. ಎರಡು ಗಂಟೆಗಳ ಪ್ರಯಾಣಕ್ಕಾಗಿ 60 ಡಾಲರ್ ತೆತ್ತು ಒಂದು ಕಾರ್ಟ್ ಪಡೆದೆವು. ಕಾರ್ಟ್ ಚಾಲಕರು ನಾವೇ.

ಮುಂದಿನ ಎರಡು ಗಂಟೆಗಳ ಕಾಲ ನಮಗೆ ಇಷ್ಟಬಂದಂತೆ ದ್ವೀಪದ ಮಾರ್ಗಗಳಲ್ಲಿ ಸುತ್ತಾಡಿದೆವು. ದ್ವೀಪದ ಸಮುದ್ರ ಕಿನಾರೆಯುದ್ದಕ್ಕೂ ಪ್ರಯಾಣಿಸಿ ತಿರುವು ಮುರುವು ಏರುತಗ್ಗುಗಳಿಂದ ಕೂಡಿನ ಬೆಟ್ಟಗಳ ಮಾರ್ಗಗಳಲ್ಲಿ